ಕರ್ನಾಟಕ ಸರ್ಕಾರ

ಮೇ 3, 2016

**ಮಾಜಿ ಸಂಸದೆ ಚಂದ್ರಪ್ರಭಾ ಅರಸ್ ಅವರ ನಿಧನಕ್ಕೆ**
**ಮುಖ್ಯಮಂತ್ರಿ ಶೋಕ**

ಬೆಂಗಳೂರು, ಮೇ 3:

ಮಾಜಿ ಸಚಿವೆ ಹಾಗೂ ಮಾಜಿ ಸಂಸದೆ ಚಂದ್ರಪ್ರಭಾ ಅರಸ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಮಾಜಿ ಮುಖ್ಯಮಂತ್ರಿ ಡಿ ದೇವರಾಜ ಅರಸು ಅವರ ಮೂವರು ಪುತ್ರಿಯರಲ್ಲಿ ರಾಜಕೀಯ ಪ್ರವೇಶಿಸಿದ ಚಂದ್ರಪ್ರಭಾ ಅರಸ್ ಅವರು ರಾಜ್ಯದ ಮಹಿಳಾ ರಾಜಕಾರಣಿಗಳಲ್ಲಿ ವಿಶೇಷ ಪ್ರತಿಭೆ ಎನಿಸಿದ್ದರು. ಅವಿಭಜಿತ ಮೈಸೂರು ಜಿಲ್ಲೆಯ ಹುಣಸೂರು ಕ್ಷೇತ್ರದ ಶಾಸಕರಾಗಿ, ರಾಮಕೃಷ್ಣ ಹೆಗಡೆ ಸಚಿವ ಸಂಪುಟದಲ್ಲಿ ಸಚಿವರಾಗಿ ಹಾಗೂ ಮೈಸೂರು ಲೋಕಸಭಾ ಸದಸ್ಯರಾಗಿ ಜನಮನ್ನಣೆ ಗಳಿಸಿದ್ದ ಚಂದ್ರಪ್ರಭಾ ಅರಸ್ ಅವರು ಇನ್ನು ನೆನಪು ಮಾತ್ರ.

ಹಿಂದುಳಿದ ವರ್ಗಗಳ ಹರಿಕಾರ ಡಿ ದೇವರಾಜ ಅರಸು ಅವರ ಜನ್ಮ ಶತಮಾನೋತ್ಸವ ವರ್ಷದಲ್ಲೇ ಚಂದ್ರಪ್ರಭಾ ಅರಸ್ ಅವರು ನಿಧನರಾದದ್ದು ನನ್ನ ದುಃಖ ಹಾಗೂ ನೋವನ್ನು ಇಮ್ಮಡಿಗೊಳಿಸಿದೆ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

***********

ಡಿಪಿಎಂ